ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ–571201

ಕರ್ನಾಟಕ ಸರ್ಕಾರ

ಕಛೇರಿ: 08272–225500
ನಿವಾಸ: 08272–225700
ಫ್ಯಾಕ್ಸ್: 08272–225900
ಈ–ಮೇಲ್:deo.kodagu@gmail.com
ವೆಬ್ ಸೈಟ್: http://www.kodagu.nic.in

---

ಸಂಖ್ಯೆ:ಪ್ರ.ವಿ/4/2018–19 ದಿನಾಂಕ: 08–09–2018

## ಅಧಿಕೃತ ಜ್ಞಾಪನ

ವಿಷಯ: ಕೊಡಗು ಜಿಲ್ಲೆಯಲ್ಲಿ ಉಂಟಾಗಿದ್ದ ಅತಿವೃಷ್ಠಿ ಸಂದರ್ಭ ತುರ್ತು ಪರಿಹಾರ ಕಾರ್ಯಕ್ಕಾಗಿ ನಿಯೋಜಿತರಾದ ಅಧಿಕಾರಿಗಳನ್ನು ಬಿಡುಗಡೆಗೊಳಿಸುವ ವಿಚಾರ.

ಉಲ್ಲೇಖ: 1. ಜಿಲ್ಲಾಧಿಕಾರಿ, ಕಾರವಾರ ಜಿಲ್ಲೆ, ಕಾರವಾರ ರವರ ಪತ್ರ ಸಂ: ಕಂಶಾ/ ಸಿಬ್ಬಂದಿ(1)/ ವಿವ–1/ 2017–48, ದಿ: 20.08.2018.
2. ಈ ಕಚೇರಿ ಅಧಿಕೃತ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ: 21.08.2018.

---

ಕೊಡಗು ಜಿಲ್ಲೆಯಲ್ಲಿ ಕೆಲ ದಿನಗಳ ಹಿಂದೆ ಆದ ಭಾರೀ ಗಾಳಿ ಮಳೆಯಿಂದ ಮಡಿಕೇರಿ ನಗರದ ಸುತ್ತಮುತ್ತ ಹಾಗೂ ಜಿಲ್ಲೆಯ ಹಲವೆಡೆ ಜಲಾವೃತ ಮತ್ತು ಭೂಕುಸಿತದಿಂದ ಮಾನವ/ ಜಾನುವಾರು ಜೀವಹಾನಿ, ಮನೆಹಾನಿ, ರಸ್ತೆಹಾನಿ ಸೇರಿದಂತೆ ಹಲವು ನಷ್ಟಗಳು ಆಗಿರುತ್ತದೆ. ಈ ಸಂದರ್ಭದಲ್ಲಿ ತುರ್ತು ಪರಿಹಾರ ಕ್ರಮಕ್ಕಾಗಿ ಸಹಕರಿಸಲು ಉಲ್ಲೇಖ (2) ರಂತೆ ಅಧಿಕೃತ ಜ್ಞಾಪನದಂತೆ ಶ್ರೀ ಅಜಯ್ ವಿ. ಕೆ.ಎ.ಎಸ್(ಕಿ.ಶ್ರೇ), ಪರಿಕ್ಷಾರ್ಥಿ ಅಧಿಕಾರಿ, ಜಿಲ್ಲಾಧಿಕಾರಿಗಳ ಕಛೇರಿ ಉತ್ತರ ಕನ್ನಡ, ಕಾರವಾರ ಹಾಗೂ ಶ್ರೀ ಆಶಪ್ಪ, ತಹಶೀಲ್ದಾರ್ ಗ್ರೇಡ್–2, ಪರಿಕ್ಷಾರ್ಥಿ, ಜಿಲ್ಲಾಧಿಕಾರಿಗಳ ಕಛೇರಿ ಉತ್ತರ ಕನ್ನಡ, ಕಾರವಾರ ಇವರನ್ನು ದಾಸ್ತಾನು ಕೇಂದ್ರ, ಕೃಷಿ ಉತ್ಪನ್ನ ಮಾರುಕಟ್ಟೆ, ಕುಶಾಲನಗರಕ್ಕೆ ನಿಯೋಜಿಸಲಾಗಿತ್ತು.

ಪ್ರಸ್ತುತ ಸದರಿ ಅಧಿಕಾರಿಗಳು ದಿನಾಂಕ:08.09.2018ರಂದು ಅಪರಾಹ್ನ ಬಿಡುಗಡೆಗೊಳ್ಳುತ್ತಿದ್ದು, ಇವರ ಬದಲಾಗಿ ಶ್ರೀ ಮಧುಸೂಧನ್, ರಾಜಸ್ವ ನಿರೀಕ್ಷಕರು, ಕುಶಾಲನಗರ ರವರನ್ನು ಸದರಿ ಸ್ಥಳಕ್ಕೆ ನಿಯೋಜಿಸಲಾಗಿದ್ದು, ಇಲ್ಲಿಗೆ ಕರ್ತವ್ಯಕ್ಕೆ ಹಾಜರಾಗಿ, ಮುಂದಿನ ಆದೇಶದವರೆಗೆ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ರವರ ನಿರ್ದೇಶನದಂತೆ ಕರ್ತವ್ಯ ನಿರ್ವಹಿಸಲು ಆದೇಶಿಸಿದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ

ಪ್ರತಿಯನ್ನು:

1. ಜಿಲ್ಲಾಧಿಕಾರಿ, ಕಾರವಾರ ಜಿಲ್ಲೆ, ಕಾರವಾರ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು, ಸೋಮವಾರಪೇಟೆ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ.